ಆದರೆ, ಕೆಲಸಕ್ಕೆ ಸೇರಿ ಎರಡು, ಮೂರು ವರುಷವಾಗುವಷ್ಟರಲ್ಲಿ ಜೋಭದ್ರ ಮುಖ ಹಾಕಿ ಹೆಣವನ್ನು ಆವಾಹಿಸಿಕೊಂಡವರಂತೆ ನಡೆದಾಡುವ ಯುವ ಸಂಕುಲವೇ ಸುತ್ತಮುತ್ತವಿರುವುದರಿಂದ, ಅವನಿನ್ನೂ ಕೆಲಸಕ್ಕೆ ಸೇರಿರದ ಕನಸು ಕಳೆದುಕೊಂಡಿರದ ಕನಸುಗಣ್ಣಿನ ತಾಜಾ ಹುಡುಗನೆಂದುಕೊಂಡರೆ ಹೇಗೆ? ಓಹ್, ಈಗೊಂದು ಸಮಸ್ಯೆ ಬಂದುಬಿಡುತ್ತೆ. ಕನಸುಗಣ್ಣಿನ ಹುಡುಗ ಈ ದೇಶದಲ್ಲಿರಲು ಹೇಗೆ ಸಾಧ್ಯ? ಕಾರ್ಯ ಕಾರಣ ಸಂಬಂಧ ಅವನೀಗ ಅಮೆರಿಕಾದಲ್ಲಿರಲೇಬೇಕಲ್ಲಾ? ಮತ್ತೆ ತಡವೇಕೆ? ಈ ಕ್ಷಣ, ವಿಮಾನ ಹತ್ತಿಸಿ, ಅಮೆರಿಕಾದಲ್ಲಿ ಎಮ್.ಎಸ್. ಮಾಡುತ್ತಿರುವ ಹುಡುಗನಾಗಿ ಪರಿವರ್ತಿಸಿಬಿಡುವ. ಇದರಲ್ಲಿ ಕಳೆದುಕೊಳ್ಳೋದೇನಿದೆ?

ಮತ್ತೆ ಚೆನ್ನೈ ಸಮುದ್ರ ದಂಡೆಯಲ್ಲಿ ಅವನಿಗೇನು ಕೆಲಸವೆಂಬ ಸಮಸ್ಯೆಯೇ? ಎಮ್.ಎಸ್. ಮುಗಿಸಿ ಕೆಲಸಕ್ಕೆ ಸೇರುವುದಕ್ಕೆ ಮುಂಚೆ ಚೆನ್ನೈಗೆ ಬಂದಿದ್ದಾನೆಂದು ಘೋಷಿಸಿಬಿಡುವಾ. ಸದ್ಯಕ್ಕೆ ಚೆನ್ನೈನಲ್ಲಿರುವುದೇ ಒಳ್ಳೆಯದು. ಏಕೆಂದರೆ ಎಲ್ಲರೂ ಅಮೆರಿಕಾ ನೋಡಿಲ್ಲವಾದ್ದರಿಂದ ಗೊತ್ತಿರುವ ಊರಾದರೆ ಮುಂದುವರಿಸಲು ಅನುಕೂಲ. ಅದೇ ಅವನೂರು ಮತ್ತು ಫೋರ್ ದಿ ಟೈಮ್ ಬೀಂಗ್ ಎಲ್ಲರದ್ದೂ. ಊರಿಗೆ ಯಾಕೆ ಬಂದಿದ್ದಾನೆಂಬ ಅನುಮಾನವೇ? ಸುಮ್ಮನೇ ಬಂದಿರಬಹುದಾದರೂ, ಭಾರತೀಯರಿಗೆ ಹೊಳೆಯುವ ಏಕಮೇವಾದ್ವಿತೀಯ ಕಾರಣವಿಲ್ಲದ್ದರಿಂದ ಹುಡುಗಿ ನೋಡಲು ಎಂದು ಸೇರಿಸಿದರೆ ಚ್ಯುತಿಯೇನೂ ಬರುವುದಿಲ್ಲವಷ್ಟೆ? ಈಗ ಯಾವ ಹುಡುಗಿಯೆಂಬ ಪ್ರಶ್ನೆ ಕಾಡುತ್ತಾ?

ಬನ್ನಿ, ಹುಡುಗಿಯನ್ನು ಎಲ್ಲಿಂದಲಾದರೂ ಹಾರಿಸಿಕೊಂಡು ಬರೋಣ. ಸುಂದರವಾಗಿರಬೇಕೇ?

